ಮೈಸೂರ ಗಿಜಿಟ.

ಸರ್ಕಾರದಿಂದ ಪಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಜೂನ್ ತಾ 14, ಸ್ - 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ.

ಸರ್ಕಾರೀ ಕಾಗದಪತ್ರಗಳು.

ಅಪಾಯಕರವಾಗಿಯೂ ಅಂಟು ಸಂಬಂಧವಾಗಿಯೂ ಇರುವ ರೋಗದ ವಿಷಯದಲ್ಲಿ ಮ್ಯುನಿಸಿಪಲ್ ಕಮ್ಮಿಟಿಯವರಿಗೂ ಅವರುಗಳ ನೌಕರ ಮಾನೇರಿಗೂ ಒಟ್ಟು ತಿಳುವಳಿಕೆ:—

1. ಅಂಟು ಸಂಬಂಧವಾದ ವ್ಯಾಧಿಯುಳ್ಳ ಒಬ್ಬ ಮನುಷ್ಯನು ಬಂದು ಸಾಂಕ್ರಾಮಿಕ ವ್ಯಾಧಿಯನ್ನು ಉಂಟುಮಾಡಬಹುದು.

2. ಉಖಾಲ್‌ಜುಲಾಬಿನ ಸ್ಥಳದಿಂದ ಬರುವ ಮನುಷ್ಯನು ಮತ್ತು ಅತಿಸಾರದಿಂದ ಮಾತ್ರ ಅನುಭವಿಸುತಿದ್ದಾಗ್ಯೂ ವ್ಯಾಧಿಯನ್ನು ಸ್ಥಳಾಂತರದಿಂದ ಅಮದ್ದುಮಾಡಬಹುದು.

3. ರೈಲ್‌ವೇ ಬಂಡಿಗಳು ಸ್ವಲ್ಪ ಕಾಲದೊಳಗಾಗಿ ಬಹುದೂರ ಅಂಟುವ್ಯಾಧಿಯನ್ನು ಸಾಗಿಸಬಹುದು.

4. ಅಪಾಯಕರವಾದ ವ್ಯಾಧಿ ಕಾಣಬರುವ ಜನಗಳ ವಿಶಿಷ್ಟ ಸಮೂಹಗಳೂ, ಅದು ತ್ವರೆಯಾಗಿ ವ್ಯಾಪಿಸುವದಕ್ಕೂ ಕೆಟ್ಟ ಚಿಕಿತ್ಸೆಯು ಸಂಬಂಧವಾದ ಅದರ ಸ್ಥಿತಿಗೂ, ಸಾಂಕ್ರಾಮಿಕದ ವೇಗಕ್ಕೂ ಅನುಕೂಲಗಳುಗಿರುತ್ತವೆ.

5. ಪ್ರಯಾಣ ಮಾಡುತ್ತಿರುವ ರಿಜಮೆಂಟ್‌ಗಳು, ಸಂತೆಗಳು, ಯಾತ್ರಾರ್ಥಿಗಳು, ಇವರುಗಳಿಂದ ಅಂಟು ವ್ಯಾಧಿಯ ಮೂಲಗಳು ಪುಂಟುಗುತ್ತವೆ. ಮತ್ತು ಅವರುಗಳು ಪ್ರಯಾಣ ಮಾಡುವ ಗ್ರಾಮಗಳ ದ್ವಾರಾ ವ್ಯಾಧಿಯನ್ನು ಸಾಗಿಸುತ್ತಾರೆ.

6. ಜನಸಮೂಹಗಳು ಸಮಯೋಚಿತವಾಗಿ ಚದರಿ ಹೋಗುವದರಿಂದ ಬಂದು ಸಾಂಕ್ರಾಮಿಕ ರೋಗದ ವೇಗವು ತಗ್ಗುತ್ತದೆ; ಪರಂತು ಅಭಿವೃದ್ಧಿಯ ವಿಶೇಷವಾದ ಅಪಾಯವನ್ನು ಉಂಟುಮಾಡುತ್ತದೆ.

7. ಸಾಂಕ್ರಾಮಿಕಗಳಾದ ರೋಗಗಳ ಅಧಿಕ್ಯಕ್ಕೆ ಅನುಕೂಲಗಳಾದ ಸ್ಥಿತಿಗಳ್ಯಾವವೆಂದರೆ, ಅನ್ನಕ್ಕಿಲ್ಲದೆ ಇರುವಣ, ಜನಗಳ ಸಂಘ ಕೀರುವಣ, ಅವರುಗಳ ಅನಾರೋಗ್ಯವಾದ ಸ್ಥಿತಿ, ಬೇಸಿಗೆ ಕಾಲ, ಗಾಳಿ ಇಲ್ಲದೆ ಇರುವಣ, ಮತ್ತು ಶರೀರ ಸಂಬಂಧವಾದ ಪದಾರ್ಥ ಅಡಗಿರುವ ಭೂಮಿಯಿಂದ ಯೇಳುವ ಹಬೆ, ನೀರು ಸಾಲದೆಯೂ ಅಶುದ್ಧವಾಗಿಯೂ ಇರುವಣ, ಪಾಯಖಾನೆಗಳಿಂದಲೂ, ಚರಂಡೀಗಳಿಂದಲೂ ಹೊರಡುವ ದುರ್ಗಂಧ.

8. ಉಖಾಲ್ ಜುಲಾಬಿಗೆ ಸಂಬಂಧಿಸಿದ ಪದಾರ್ಥಗಳು ಬಂದಾವರ್ತಿ ಅಡಗಿರುವ ಭೂಮಿಯು ಬಹುಕಾಲ ವಿಷವನ್ನು ಪುಳಿಸಿಕ್ಕೊಂಡು ಅದು ನಷ್ಟವಾದಾಗ ಅದನ್ನು ಪುನಶ್ಚ ಪುಂಟುಮಾಡುತ್ತದೆ.

9 ಅಂಟುವ್ಯಾಧಿಯನ್ನು ಸಾಗಿಸುವ ಬಗ್ಯೆ ಗಾಳಿಯು ಬಂದು ಯಾನವಾಗಿರುತ್ತೆ. ಆದರೆ, ಹಾಗೆ ಕಳುಹಿಸಲ್ಪಡುವಣ ಬಹಳ ಕೊಂಚವಾದ ಘಾಸಲೆಗೆ ಹದ್ದುಪಡಿಸಲ್ಪಟ್ಟಿರುತ್ತೆ. ನೀರೂ ಹೊಟ್ಟೆಯಲ್ಲಿರುವ ಆಹಾರವೂ, ಕರೀರದಲ್ಲಿ ಉಖಾಲ್ ಜ್ವರಾಬ ಸಂಬಂಧಿಯಾದ ವಿಷ ಹುಟ್ಟಿಸುತ್ತವೆ. ಮತ್ತು ಮುಖ್ಯವಾಗಿ ಉಸುರು ಬಿಡುವ ಮತ್ತು ಆಹಾರ ತಿನ್ನುವ ದ್ವಾರಗಳಿಂದ ವಿಷವು ಪ್ರವೇಶಿಸುತ್ತದೆ.

10. ಅಂಟು ರೋಗದ ಮುಖ್ಯಾಧಾರಗಳ್ಯಾವವೆಂದರೆ, ಉಖಾಲ್‌ಜ್ವರಾಬ ವಿಷಯದಲ್ಲಿ ಅಭೈರ್ಯ ಪಡುವಣ, ಮತ್ತು ಶಿಡುಬಿನ ವಿಷಯದಲ್ಲಿ ಹೊಕ್ಕು ಕಟ್ಟುವಣ; ಇವುಗಳ ಬೆನೆಯಿಂದ ದೀರ್ಘ ಕಾಲ ಮಧ್ಯಾವಕಾಶ ಪುಂಟಾದ ಬಳಿಕಲೂ ಅನುಕೂಲ ವಿದ್ಯಮಾನಗಳನು ನೆರಿಸಿ ವ್ಯಾಧಿ ವ್ಯಾಪಿಸಿ ಬಹುದು.

11. ನೆಮಲಿಗುಟ್ಟು ಯೆಂಬ ಗಿಡ ಬೆಳೆಯುವ ಸ್ಥಳಗಳಲ್ಲಿ ಉಖಾಲ್‌ಜ್ವರಾಬ ತಗಲುವದಿಲ್ಲವೆಂತಲೂ ಕರ್ನೂಲ್ ಡಿಸ್ಟ್ರಿಕ್ಟಿನಲ್ಲಿ ಬಲ್ಲ ವರಂ ಯೆಂಬ ಸ್ಥಳದಲ್ಲಿ ಬೇ ಹುವ್ವಿಳ್ಳ ಬಂದು ಮರ ಬಳೆಯುತ್ತಾಗಿ ಉಖಾಲ್‌ಜ್ವರಾಬ ತಗಲುವದಿಲ್ಲವೆಂತಲೂ ಸಾರ್ವಜನೀನವಾಗಿ ನಂಬಲ್ಪಟ್ಟಿದೆ, ಸದರೀ ಹುವ್ವಿನ ವಾಸನೆಯು ಸಾವಿರ ಅಡಿಗಳ ಘಾಸಲೆಗೆ ವ್ಯಾಪಿಸುತ್ತೆ.

12. ಇದರಡಿ ನಮೂದಿರುವದು, ಉಖಾಲ್ ಜ್ವರಾಬ ಪುಂಟಾಗುವದಕ್ಕೆ ಹೇತುವಾಗುತ್ತೆಂದು ಊಹಿಸಲ್ಪಟ್ಟಿದೆ; ಹೊಸ ಧಾನ್ಯ ಮುಗ್ಗಿ ಹೋದ ಧಾನ್ಯ, ಬಿಸಿಲುಕಾಲದಲ್ಲಿ ಹಣ್ಣು, ಸಾತೇಕಾಯಿ, ಅತಿಪಕ್ವಫಲ, ಆಹಾರದ ದೌರ್ಲಭ್ಯ, ಮತ್ತು ಜಂತುಸಂಬಂಧವಾದ ಅಥವಾ ಸೊಪ್ಪುಸೆದೆ ಸಂಬಂಧವಾದ ಅಶುದ್ಧತೆ ಪುಂಟುವ ನೀರು—

13. ಅಂಟು ರೋಗ ತಗಲಿದ ಬಂದು ಸ್ಥಳವನ್ನು ಸ್ವಸ್ಥಪಡಿಸಲಿಕ್ಕೆ ಮಾಡಿಕೆಯಾದ ಕ್ರಮಗಳ್ಯಾವವೆಂದರೆ, ಜನಾವಾಸಗಳಾದ ಕಟ್ಟಣಗಳಲ್ಲಿ ಜನಗಳ ಹೆಚ್ಚು ಗುಂಪನ್ನು ನಿರೋಧಿಸುವಣ, ವಿಶಾಲಗಳಾದ ರಸ್ತೆಗಳು, ಮೈದಾನ ನೆಲಗಳು ಪಾಯಖಾನೆ ಗುಂಡಿಗಳನ್ನು ಮುಪ್ಪುಕೂಫ್ ಮಾಡುವಣ, ಜಂತುಸಂಬಂಧವಾದ ಮತ್ತು ಸೊಪ್ಪು ಸೆದೆ ಸಂಬಂಧವಾದ ತಮಾಂ ಕಚರಾ ಗಲೀಜ್‌ಗಳನ್ನೂ ಸಾಗಿಸುವಣ, ಮನೆಗಳಿಂದಲೂ, ಬೀದಿಗಳಿಂದಲೂ, ಹರಿಯುವ ಗಲೀಜ್ ಚರಂಡಿಯನ್ನು ತ್ವರೆಯಾಗಿ ಸಾಗಿಸುವಿಕೆ, ಬಚ್ಚಲು, ಚರಂಡೀ, ಬಂಡಿ ಮಿಟ್ಟಿಗಳು, ಸ್ಮಶಾನಭೂಮಿ ಇವುಗಳನ್ನು ಭೂಮಿಗಳ ಮತ್ತು ಕೆರೆಗಳ ಸಮೀಪದಿಂದ ತೆಗೆಯುವದರ ದೆಸೆಯಿಂದ ನೀರನ್ನು ಶುದ್ಧವಾಗಿ ಇಡುವಣ, ಸುಣ್ಣ ಬಳದು ಮನೆಗಳಿಗೆ ಅಂಟುರೋಗ ತಗಲದಂತೆ ಮಾಡುವಣ, ಹಳ್ಳಗಳನ್ನು ಕೊರಕಲುಗಳನ್ನೂ ಸಮಪಡಿಸುವಣ, ಹಾಳು ಗೋಡೆಗಳನ್ನು ತಳ್ಳಿಹಾಕುವಣ, ಜನಾವಾಸಗಳಿಂದ ತಪಾಂ ದನಗಳನ್ನು ಸಾಗಿಸಿಬಿಡುವಣ, ರೋಗ ತಗಲಿದ ಬಟ್ಟೆಗಳನ್ನು ತೊಳೆಯುವಣ ಅಥವಾ ನಾಶಪಡಿಸುವಣ, ಮೈ ತೊಳೆಯುವ ಬಗ್ಯೆ ಸಾಧನಗಳನ್ನು ಏರ್ಪಡಿಸುವಣ, ತಮಾಂ ಆಹಾರ ಪದಾರ್ಥಗಳನ್ನು ಅಜಮಾಯಿಷೀ ಮಾಡುವಣ, ಮುಂಜಾಗ್ರತೆಯ ಲಕ್ಷಣಗಳನ್ನು ಕುರಿತ ಚಿಕಿತ್ಸೆಯ ಬಗ್ಯೆ ಸಾಮಾನ್ಯ ಬುದ್ಧಿವಾದಗಳನ್ನು ತಿಳಿಯಪಡಿಸುವಣ, ಔಷಧಗಳನ್ನು ಧರ್ಮಾರ್ಥವಾಗಿ ಒದಗಿಸುವಿಕೆ, ಗಂಧಕ, ಮರದೆಣ್ಣೆ, ಕೀಲೆಂಣೆ, ಕರ್ಪೂರ ಅಥವಾ ಪ್ರಸಿದ್ಧಗಳಾಗಿಯೂ ಸುಲಭಗಳಾಗಿಯೂ ಇರತಕ್ಕ ಶುದ್ಧಿ ಪಡಿಸುವ ಇತರ ಪದಾರ್ಥಗಳು ಇವುಗಳಿಂದ ಮನೆಗಳಲ್ಲೂ ಬೀದಿಗಳಲ್ಲೂ ಹೊಗೆ ಹಾಕುವಣ.

14. ಯಾವದಾದರೂ ಮುಖ್ಯವಾದ ಸ್ಥಳದಲ್ಲಿಯಾಗಲಿ ಒಂದು ಪಟ್ಟಣದ ಪೇಟೆಯಲ್ಲಿಯಾಗಲಿ ಉಖಾಲ್‌ಜ್ವರಾಬ ವ್ಯಾಪಿಸಿದರೆ ನಿವಾಸಿಗಳು ಯುಕ್ತವಾಗಿ ವೈದ್ಯ ಸಹಾಯ ಪುಂಟಾಗಬಹುದಾದ ಮೇಲೆ ಪ್ರತ್ಯೇಕ ಪ್ರತ್ಯೇಕ ಶಿಬಿರಗಳಾಗಿ ಹೋಗುವಂತೆ ಪ್ರೇರಿಸಲ್ಪಡತಕ್ಕದ್ದು, ಅಂತಾ ಶಿಬಿರ ಸ್ಥಾನ ಗ್ರಾಮ ಅಥವಾ ಪಟ್ಟಣದಿಂದ ಮತ್ತು ನಿಲುವು ನೀರುಳ್ಳ ಗದ್ದೆಗಳು ಅಥವಾ ಮಡುವುಗಳು ಇಂತಾದ್ದರಿಂದ ತಕ್ಕ ಪ್ಪುದೂರ ಆಚೆಗೆ ಸಾಗಿಸಲ್ಪಟ್ಟು ಎತ್ತರವಾಗಿಯೂ ವಣಗಿಯೂ ಇರುವ ಸ್ಥಾನಗಳಲ್ಲಿ ಚುನಾಯಿಸಲ್ಪಡತಕ್ಕದ್ದು. ಹೊಳೆಗಳ ದಡಗಳನ್ನು ಹಿಂದೆ ಯಾವದಾದರೂ ಕಾಲದಲ್ಲಿ ಉಖಾಲ್‌ಜ್ವರಾಬ ಕಾಣಿಸಿಕೊಂಡ ನೆಲವನ್ನು ಬಿಟ್ಟುಬಿಡತಕ್ಕದ್ದು, ತಮಾಂ ಬಟ್ಟೆಗಳ ಸಂಪೂರ್ಣವಾದ ಬಗೆಯುವಿಕೆ ಮತ್ತು ಶಿಬಿರಕ್ಕೆ ಸಾಗಿಸಲ್ಪಟ್ಟ ಗೃಹಕೃತ್ಯದ ತಮಾಂ ಸಾಮಾನುಗಳನ್ನು ಶುದ್ಧಪಡಿಸುವಣ ಇಂತಾದ್ದು ಅವಶ್ಯಮಾಡಲ್ಪಡತಕ್ಕದ್ದು. ಬಹುಕಾಲ ಪುಪಯೋಗಿಸಲ್ಪಡದೆ ಇರುವ ಭೂಮಿಗಳನ್ನು ಅಂತಾ ಸಂದರ್ಭಗಳಲ್ಲಿ ಪುಪಯೋಗಿಸಕೂಡದು

ಸಂತೆಗಳ ಮತ್ತು ವೃತ್ಸವಗಳ ವಿಚಾರಣೆ ಮತ್ತು ಸಂರಕ್ಷಣೆ ಇಂತಾದ್ದರ ವಿಷಯದಲ್ಲಿ ಮಾಡಲ್ಪಡತಕ್ಕ ಏರ್ಪಾಡುಗಳಿಗಾಗಿ ರೂಲ್ಸ್.

1 ವಸತಿ.

1. ಜನಸಮುದಾಯದ ಸ್ಥಳಕ್ಕೆ ಕೇವಲ ಸಮೀಪವಾಗಿಯೂ ಎತ್ತರವಾಗಿಯೂ ಖಚ್ಚಿತವಾಗಿಯೂ ವಿಶುದ್ಧವಾಗಿಯೂ ಮತ್ತು ನಿರ್ದುಷ್ಟವಾದ ಜಮೀನಿನ ಮೇಲೆ ವ್ಯಾಪಿಸುವ ಗಾಳಿಗಳ ವಿಷಯದಲ್ಲಿಯೂ ಪರಿಶುದ್ಧವಾದ ಗಾಳಿಯ ವಿಷಯದೊಳಗೂ ಯುಕ್ತವಾದ ಶಿಬಿರ ಸ್ಥಾನವನ್ನು ಚುನಾಯಿಸಿ ಯೇರ್ಪಡಿಸತಕ್ಕದ್ದು.

2. ಜಮೀನನ್ನು ಡಿವೀಜ್ಯಗಳಾಗಿಯೂ, ಭಾಗಗಳಾಗಿಯೂ, ವಿಭಾಗಿಸಿ 40ರಿಂದ 20 ಅಡಿ ವರಿಗೆ ಅಗಲವುಳ್ಳ ದೊಡ್ಡಬೀದಿಗಳಾಗಿಯೂ ಸಣ್ಣ ಬೀದಿಗಳಾಗಿಯೂ ವಿಂಗಡಿಸತಕ್ಕದ್ದು.

3. ಜಾತಿಗಳ ಪ್ರಕಾರ ಹಂಗಾಮಿಯಾಗಿ ಚಪ್ಪರಗಳನ್ನೂ, ಗುಡಿಶಿಲುಗಳನ್ನೂ ಕಲ್ಪಿಸತಕ್ಕದ್ದು.

4. ಬಂಡಿಗಳಿಗಾಗಿಯೂ, ದನಗಳಿಗೋಸ್ಕರವೂ ಪ್ರತಿ ಸೆಕ್ಷನಿನ ಮುಂಭಾಗಕ್ಕೆ ಜಾಗಾವನ್ನು ಬಿಡತಕ್ಕದ್ದು.

365

II ಸಂರಕ್ಷಣೆಯ ವಿಷಯ.

1. ಶಿಬಿರದ ಜರೂರಾತಿಗೆ ಬೇಕಾದ ಪ್ರತಿ ಡಿವೀಜನಿನ ಮುಂಭಾಗದಲ್ಲಿ ಹಂಗಾಮಿ ಚಕರಂಡೀಗಳನ್ನು ಕಟ್ಟಿಸತಕ್ಕದ್ದು.

2. ಗ್ರಾಮದಿಂದ ಅಥವಾ ಪಹರ್‌ನಿಂದ ಮತ್ತು ಶಿಬಿರದಿಂದ ಪ್ರತಿ ದಿನವೂ ತಮಾಂ ಕಸವನ್ನೂ, ಸಗಣಿಯನ್ನೂ ಗಲೀಜನ್ನೂ ತೆಗೆಯಿಸಿ ಹಾಕತಕ್ಕದ್ದು.

3. ವಾಸಸ್ಥಾನಗಳಿಂದ ತಮಾಂ ಜಲ ಮಲಾದಿಗಳನ್ನೂ ದಿನಕ್ಕೆ ಯೆರಡಾವರ್ತಿ ತೆಗೆಯಿಸಿ ಪಾಯಖಾನೇ ಗುಂಡೀಗಳ ಮೇಲೆ ಮಣ್ಣು ಹಾಕತಕ್ಕದ್ದು,

4. ತಮಾಂ ಕಚರೇಗಳನ್ನೂ ಸುಟ್ಟು ಬಿಟ್ಟು, ಗಲೀಜನ್ನು ಹೂಳಿ ಬಿಡತಕ್ಕದ್ದು.

III ನೀರು ಒದಗಿಸುವಿಕೆ.

ನೀರು ಒದಗಿಸುವ ಬಗ್ಗೆ ಯೋಗ್ಯವಾದ ಪರಂತು ಪ್ರತ್ಯೇಕ ಪ್ರತ್ಯೇಕಗಳಾದ ಕೆರೆಗಳು, ಭೂಮಿಗಳು, ಕಟ್ಟಿಗಳು, ಅಥವಾ ಯಿತರ ಜಲಾಧಾರಗಳನ್ನು ಚುನಾಯಿಸತಕ್ಕದ್ದು.

(a) ಪಾನಕ್ಕೂ, ಗೃಹಕೃತ್ಯ ಕೆಲಸಗಳಿಗಾಗಿಯೂ ಮಾತ್ರವೇ.
(b) ಸ್ನಾನ ಕಾರ್ಯಕ್ಕೆ ಮತ್ತೂ,
(c) ದನಗಳು ನೀರು ಕುಡಿಯುವ ಬಗ್ಯೂ.

2. ಸಾಕಾರ್ಥ ಚುನಾಯಿಸಲ್ಪಟ್ಟಿರುವ ನೀರು ಕೆಡದೆ ಯಿರುವದಕ್ಕೋಸ್ಕರ ನೀರಿನ ಮೂಲಸ್ಥಾನದ ಬಳಿ ಬಂದು ಪೋಲೀಸ್ ಪಹರೇಯನ್ನು ಯಿಡತಕ್ಕದ್ದು.

3. ಅರವಟ್ಟಿಗೆಗಳನ್ನು ಯಿಡಿಸತಕ್ಕದ್ದು.

IV. ವೈದ್ಯ ಸಂಬಂಧವಾದ ಮೇಲ್ ವಿಚಾರಣೆ.

1. ಒಬ್ಬ ಮೆಡಿಕೆಲ್ ತಾಪೇದಾರನು ಆರೋಗ್ಯದ ಯೇರ್ಪಾಡುಗಳನ್ನು ಮೇಲ್ ವಿಚಾರಣೆ ಮಾಡಿ ಔಷಧಗಳನ್ನು ಹಂಚತಕ್ಕದ್ದಲ್ಲದೆ, ಜನಸಂಘದ ಆರೋಗ್ಯವನ್ನು ಷರಾ ಬರೆದುಕೊಂಡು ತಮಾಂ ಮರಣಗಳನ್ನೂ ರಿಜಿಸ್ಟರ್ ಮಾಡಿ, ಹಂಗಾಮಿ ಆಸ್ಪತ್ರೆಯ ಚಾರ್ಜನ್ನು ವಹಿಸತಕ್ಕದ್ದು.

2. ಜನಗಳು ಬರುವದನ್ನು ಅಡ್ಡಿಪಡಿಸುವ ಸ್ಥಾನಗಳಲ್ಲಿ ತಮಾಂ ಪ್ರಯಾಣಸ್ಥರನ್ನು ಪರೀಕ್ಷಿಸುವ ಬಗ್ಯೂ, ಮತ್ತು ಜರೂರಿದ್ದಲ್ಲಿ ಕೂಡಲೆ ಉಪಯೋಗಿಸುವ ಬಗ್ಯೂ ಉಖಾಲ್ ಜಲಾಬ್ ಮಾತ್ರೆಗಳನ್ನು ಹಂಚುವ ಬಗ್ಯೂ, ಮತ್ತು ಉಖಾಲ್ ಜಲಾಬ ತಗಲಿದ ಮನುಷ್ಯರನ್ನ ಮುಖ್ಯಗಳಾದ ಚಪ್ಪರಗಳಲ್ಲಿ ಸಾಗಿಸುವದಕ್ಕೂ, ಏಜಂಟನ್ನು ನಿಯಮಿಸತಕ್ಕದ್ದು.

V. ಆಕಸ್ಮಿಕಗಳಾದ ಸಂಭವಗಳ ವಿಷಯದಲ್ಲಿ ಮುಂಜಾಗ್ರತೆ.

1. ರೋಗ ತಗಲಿದ ಜನಗಳು ಬಹಳವಾಗಿರುವ ಸಂಗತಿಗಳಲ್ಲಿ, ಪ್ರತಿ ಪಹರ್, ದೇವಸ್ಥಾನ ಅಥವಾ ಪುಣ್ಯಸ್ಥಾನ, ಯಿಂತಾದ್ದರಲ್ಲಿ ಒಳಗೆ ಹೋಗುವದಕ್ಕೂ ಹೊರಗೆ ಬರುವದಕ್ಕೂ ಗೇಟುಗಳೆಂಬ ಬಾಗಿಲುಗಳನ್ನು ನಿಯಮಿಸಿ ಪದ್ದು ಮಾಡಲ್ಪಟ್ಟ ಪ್ರದೇಶಗಳಲ್ಲಿ ಭಕ್ತಾದಿಗಳು ಬಹುಮಂದಿ ಆಕ್ರಮವಾಗಿ ಸೇರುವದನ್ನ ನಿರೋಧಿಸುವ ಬಗ್ಯೆ ಕಟಕಟೆಗಳನ್ನು ಕಟ್ಟಿಸತಕ್ಕದ್ದು.

2. ಜೆಂಕಿಗಳು ತಗಲದಂತೆ ಯೇರ್ಪಾಡು ಮಾಡತಕ್ಕದ್ದು.

VI. ಪೊಲೀಸಿನವರು ಮಾಡತಕ್ಕ (ಆರೋಗ್ಯ ವಿಷಯದ ವಿಚಾರಣೆ.)

1. ರೋಗ ತಗಲಿದ ಮತ್ತು ಮರಣ ವುಂಟಾದ ತಮಾಂ ಸಂಗತಿಗಳನ್ನೂ, ಮೆಡಿಕೆಲ್ ತಾಪೇದಾರನ ಜಾಹೀರಾತಿಗೆ ತರತಕ್ಕದ್ದು.
2. ಔಷಧಗಳು ಕೊಡುವ ಬಗ್ಯೆ ಆಸ್ಪತ್ರೆಗಳ ಮತ್ತು ಡಿಪೋಗಳ ಜನಗಳಿಗೆ ಜಾಹೀರ್ ಮಾಡತಕ್ಕದ್ದು.
3. ರೋಗದ ಮುಂದು ಲಕ್ಷಣಗಳು ಕಾಣಬಂದಲ್ಲಿ ಔಷಧಗಳನ್ನು ಕೇಳಿ ಕೊಳ್ಳುವಂತೆ ಯಾತ್ರೆಯ ಜನಗಳಿಗೆ ಎಚ್ಚರಿಕೆ ಮಾಡತಕ್ಕದ್ದು.

VII. ಪಾಯಖಾನೆಗಳನ್ನು ಕಟ್ಟುವಿಕೆ.

1. ಪಾಯಖಾನೆಗಳ ಸುತ್ತಲೂ ಆವರಣಗಳಿರತಕ್ಕದ್ದು, ಸದರೀ ಆವರಣಗಳಲ್ಲಿ 2 ಅಡಿ ಅಗಲವೂ 3 ಅಡಿ ಆಳವೂ ಉಳ್ಳ ನವಾನಗಳಾದ ಕಾಲ್ವೆಗಳು ಅಗಿಯಲ್ಪಡತಕ್ಕದ್ದು; ತೆಗೆಯಿಸಿ ಹಾಕಲ್ಪಟ್ಟ ಮಣ್ಣು ಅವುಗಳ ಪಕ್ಕಗಳಲ್ಲೇ ಜಮಾಯಿಸಿ ಯಿಡಲ್ಪಡತಕ್ಕದ್ದು, ಆ ಪೈಕೀ ಒಂದು ಭಾಗವು ದಿನಕ್ಕೆ ರಡಾವರ್ತಿ ಪುಲವನ್ನು ಮುಚ್ಚುವದಕ್ಕೋಸ್ಕರ ಉಪಯೋಗಿಸಲ್ಪಡತಕ್ಕದ್ದು.

2. ಜಾತ್ರೆ ಆಖೈರಾದ್ಮಾಗ ಈ ಚರಂಡೀಗಳು ಪೂರಾ ಮುಚ್ಚಲ್ಪಡತಕ್ಕದ್ದು.

VIII. ಒಟ್ಟು ವಿಷಯ.

1. ಜಾತ್ರೆಗಳಿಗೂ ಸಂತೆಗಳು ವಗೈರೇಗಳಿಗೂ ಪೂರ್ವದಲ್ಲಿ ಛತ್ರಗಳು, ಮಂಟಪಗಳು, ಮತ್ತು ಜಮೀರ್ಗಳು, ಬಿರ ಮಾಡತಕ್ಕ ಅಥವಾ ಮೊಕ್ಕಾಂ ಮಾಡತಕ್ಕ ಜಾಗಾಗಳಾಗಿ ಪ್ರಯಾಣಸ್ಥರು ವಗೈರೇರಿಂದ ಸಾಧಾರಣವಾಗಿ ಪರಿಗ್ರಹಿಸುವ ಜಮೀರ್ಗಳು ಇವು ಡಿಸ್ಟ್ರಿಕ್ಟ್ ಅಧಿಕಾರಿಗಳಿಂದ ವಳ್ಳೆಯ ಆರೋಗ್ಯ ಸ್ಥಿತಿಯಲ್ಲಿ ಯಿಡಲ್ಪಡತಕ್ಕದ್ದು, ಮತ್ತು ತಮಾಂ ಜಲಾಧಾರಗಳೂ, ಕುದ್ಧಪಡಿಸಲ್ಪಡತಕ್ಕದ್ದು; ಮತ್ತು ಪ್ರಯಾಣಸ್ಥರು, ಯಾತ್ರಾರ್ಥಿಗಳು ಯಥಾಯಥರಾಗಿ ಚೆದರಿ ಹೋಗುವ ತನಕ ಯೋಗ್ಯವಾದ ಆರೋಗ್ಯ ಸ್ಥಿತಿಯಲ್ಲಿ ಸದರೀ ವಿಷಯಗಳು ಪೋಷಿಸಲ್ಪಡತಕ್ಕದ್ದು.

2. ಔಷಧಗಳನ್ನು ಬಗರ್ ರುಸುಂ ಕೊಡುವ ಬಗ್ಯೆ ಆಸ್ಪಿಟಲ್ಗಳೂ ಡಿಪೋಗಳೂ ಸ್ಥಾಪಿಸಲ್ಪಟ್ಟವೆ ಯೆಂತಲೂ, ಪ್ರಥಮತಃ ರೋಗ ಹುಟ್ಟಿದಾಗ ಜನಗಳು ಸದರೀ ಔಷಧಗಳನ್ನು ಪಡಕೊಳ್ಳತಕ್ಕದ್ದೆಂತಲೂ, ನೋಟೀಸ್ಗಳಲ್ಲಿ ನಮೂದಿಸಿ ಬಿರದಲ್ಲಿಯೂ ಮತ್ತು ಷಹರ್ ನೊಳಗೂ ಸರ್ವತ್ರ ದೇಶಭಾಷೆಯೊಳಗೆ ಬರೆಯಲ್ಪಟ್ಟು ಚಿಕಟಾಯಿಸಲ್ಪಡತಕ್ಕದ್ದು, ಮತ್ತು ಸದರೀ ನೋಟೀಸ್ಗಳನ್ನು ಬಟವಾಡೀ ಮಾಡುವಂತೆ ಪೊಲೀಸ್ನವರು ನೇಮಿಸಲ್ಪಡತಕ್ಕದ್ದು.

3. ಜನಗಳ ಅನುಕೂಲಕ್ಕೋಸ್ಕರ ಮಾಡಲ್ಪಟ್ಟ ಯೀಪರ್ಪಾಡುಗಳನ್ನು ಕುರಿತ ನೋಟೀಸ್ಗಳು ಬಿರದಲ್ಲಿಯೂ, ಬಿರಕ್ಕೆ ಹೋಗತಕ್ಕ ಆಖೈರ್ ಮೊಕ್ಕಾಂಗಳೊಳಗೂ ಚಿಕಟಾಯಿಸಲ್ಪಡತಕ್ಕದ್ದು.

4. ಉತ್ಸವ, ಪರಷೆಗಳು ಅಥವಾ ಸಂತೆಗಳು ಇಂತಾದ್ದನ ಸಮಾಪ್ತಿಯ ಕಾಲದಲ್ಲಿ ಜನಗಳೊಳಗೆ ಉಬಾಲ್ ಜ್ವರಾದಿ ವ್ಯಾಪಿಸಿಯಿದ್ದರೆ, ಮೊಕ್ಕಾಂ ಭೂಮಿಗಳನ್ನು ಉತ್ತು ಸಾಧ್ಯವಾದರೆ ಕೆಲವು ಹಸುರು ಧಾನ್ಯಗಳನ್ನು ಪೇರಾವ ಮಾಡತಕ್ಕದ್ದಲ್ಲದೆ, ಛತ್ರಗಳಲ್ಲೂ ಚಾವಡೀಗಳಲ್ಲೂ ಹೊಗೆ ಹಾಕಿ ಸುಣ್ಣ ಬೊಳೆಯತಕ್ಕದ್ದು.

ತಾರೀಖು 1ನೇ ಏಪ್ರೆಲ್ 1884.

ಸ್ಟ್ಯಾಂಡಿಷ್ ಲೀ,
ಸ್ಯಾನಿಟೇರಿ ಇಂಜನಿಯರ್.

Mysore Government Press, Bangalore—1884.